"...." ಅವಳೇ ಅಂದು ನನ್ನ ಕೈಗಿತ್ತ ಆ ಅದೃಶ್ಯ ಲಗಾಮನ್ನು, ಹೇಗೂ ಕೈಬಿಟ್ಟುಹೋಗಲಾರದೆಂಬ ಭರವಸೆಯಲ್ಲಿ ಸಡಿಲ ಬಿಟ್ಟಿದ್ದೇನೆ." (ಪು. 31) ಇಲ್ಲಿನ ಲೈಂಗಿಕ ಕ್ರಿಯೆಯ ವರ್ಣನೆ ಸ್ತ್ರೀ ಪುರುಷರ, ದೈಹಿಕ ಮಾನಸಿಕ ತೃಪ್ತಿ ಮತ್ತು ಆನಂದಗಳಿಗೆ ಒತ್ತು ಕೊಡುವುದಿಲ್ಲ. ಅದನ್ನೂ ಮೀರಿ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಧಾರ್ಮಿಕ ಆಯಾಮಗಳನ್ನು ಪಡೆದುಕೊಳ್ಳುತ್ತದೆ. 'ತಾಳಿ'ಯು ಪ್ರಧಾನ ಅಧೀನ ಮತ್ತು ಸಂಸ್ಕೃತಿಯನ್ನು ಗುರುತಿಸುವ ಸಂಕೇತವಾಗಿ ಬರುತ್ತದೆ. ಗಂಡ ಮತ್ತು ಹೆಂಡತಿಯ ಲೈಂಗಿಕ ಕ್ರಿಯೆ ಎಲ್ಲರೂ ಒಪ್ಪುವ ಮತ್ತು ನಿರೀಕ್ಷಿಸುವಂತಹದ್ದಾದರೂ ಇಲ್ಲಿ ಆ ಕ್ರಿಯೆಗೆ ಗಂಡು ತನ್ನ ಯಜಮಾನ್ಯವನ್ನು ಸ್ಥಾಪಿಸುವ, ಹೆಣ್ಣು ತನಗಿಂತ ಕೀಳು ಎಂದು ದೃಢನಿಶ್ಚಯ ಮಾಡಿಕೊಂಡು ಬಿಡುವ, ಜೀವನದುದ್ದಕ್ಕೂ ಆಕೆ ಅಧೀನವಾಗಿಯೇ ಬದುಕಬೇಕ್ನುವ ಪ್ರಬಲವಾದ ಮೌಲ್ಯವಾಗಿ ನಂಬಿಕೆಯಾಗಿ ಅವನ ಮನಸ್ಸಿನಲ್ಲಿ ಬೇರೂರುವಂತೆ ಮಾಡಿ ಬಿಡುತ್ತದೆ. ಹೆಣ್ಣಿನಲ್ಲೂ ಸಹ ಸಿಮೋನ್‌ದ ಬುವಾ ಹೇಳುವಂತೆ ಹುಟ್ಟುವಾಗ ಹೆಣ್ಣುಮಗು ಎನಿಸಿಕೊಂಡು ಬೆಳೆಯುತ್ತಾ ಹೋದಂತೆ ಪ್ರಕೃತಿ ಸಹಜವಾದ ಹೆಣ್ಣುತನವನ್ನು ಕೂಡಿಸಿಕೊಂಡು ಹೆಂಗಸು ಅನ್ನಿಸಿಕೊಳ್ಳಬೇಕಾದವಳು ಪುರುಷ ಪಾರಮ್ಯದ ಸಾಮಾಜಿಕ ತರಬೇತಿಯಲ್ಲಿ ಸ್ತ್ರೀಯತ್ವ ಎಂಬಲ್ಲಿ ನೆಲೆಗೊಂಡುಬಿಡುತ್ತಾಳೆ. ತಾಳಿಯು ಗುಲಾಮಗಿರಿಯ ಸಂಕೇತ ಎಂಬ ಅರಿವು ಉಂಟಾಗಲಾರದ ಸ್ಥಿತಿಗೆ ಪುರುಷ ನಿರ್ಮಿತ ಸಮಾಜ ಆಕೆಗೆ ತರಬೇತಿ ನೀಡಿಬಿಟ್ಟಿರುತ್ತದೆ.

ರೇಖಾ ತನ್ನ ತಂದೆಯ ಯಜಮಾನಿಕೆಯನ್ನು ವಿರೋಧಿಸುತ್ತಾಳಾದರೂ ತನ್ನ ತಾಯಿಯ ರೀತಿಯಲ್ಲಿಯೇ ರಾಜಿಯಾಗುತ್ತಾಳೆ. ಅವಳ ಬಂಡಾಯ ಪುರುಷ ಸಮಾಜದ ಎದುರು ಗಟ್ಟಿಯಾಗಿ ನಿಲ್ಲುವುದಿಲ್ಲ. ಅಷ್ಟರ ಮಟ್ಟಿಗೆ ಪುರುಷ ಸಮಾಜ ಪ್ರಭಾವಶಾಲಿಯಾದ್ದು. ತನ್ನ ತಂದೆಯ ವಿರುದ್ಧ ಆಗಾಗ ಮಾತಾಡಿದರೂ ಕೊನೆಗೆ ಶರಣಾಗತಿಯಲ್ಲಿ ಮುಕ್ತಾಯವಾಗುತ್ತದೆ. ಆಧುನಿಕ ಸಮಾಜದಲ್ಲಿ ಕುಟುಂಬ ವಿಘಟನೆಯ ಹಾದಿ ಹಿಡಿದಿದೆ. ಆದ್ದರಿಂದ ಇಲ್ಲಿ ಪರಸ್ಪರ ಅನ್ಯರಾಗಿ ಉಳಿಯುವುದೇ ಹೆಚ್ಚು. ಈ ಕಾದಂಬರಿಯಲ್ಲಿ ಬರುವ ರಮಣ, ರೇಖಾ, ನಿರೂಪಕ ಉಳಿದವರಿಗಿಂತ ಭಿನ್ನರಾಗಿದ್ದು ಅನ್ಯರಾಗಿ ಉಳಿಯುತ್ತಾರೆ. ವಿಜಿ ಮತ್ತು ಮಗಳು ರೇಖಾ ಕೆಲವೊಮ್ಮೆ ಒಂದಾಗಿ ಮತ್ತೊಮ್ಮೆ ಬೇರೆಬೇರೆಯಾಗುತ್ತಾರೆ. ಆದರೆ, ನಿರೂಪಕ ಅನ್ಯನಾಗುತ್ತಾ ಹೋಗುತ್ತಾನೆ. ಉಳಿದವರಲ್ಲಿ ಅಂತಣ್ಣನ ಸ್ವಭಾವ ಬೇರೆ, ಸುರೇಶ ಮತ್ತು ಅವನ ಹೆಂಡತಿಯ ಸ್ವಭಾವ ಬೇರೆಬೇರೆಯಾಗಿದೆ. ಇಲ್ಲಿ ಸಾಮರಸ್ಯವಿಲ್ಲದಿದ್ದರೂ ಸಾಮರಸ್ಯವಿದೆ. ನಂಬಿಕೆ ಇಲ್ಲದಿದ್ದರೂ ನಂಬಿಕೆಯ ಮೇಲೆ ನಡೆಯಬೇಕು. ಆಗಲೇ ಬದುಕು.

ಈ ಕಾದಂಬರಿಯಲ್ಲಿ ಸಜೀವವಾದ ಸಂಬಂಧಗಳಿವೆ ನಿಜ. ಆದರೆ, ಅವೆಲ್ಲವೂ ಅನುಕೂಲಕ್ಕೆ ತಕ್ಕಂತೆ ಇವೆ. ಉದಾಹರಣೆಗೆ, ರೇಖಾ ಅವಳ ತಂದೆಯ ಸಂಬಂಧ, ವಿಜಿ ಮತ್ತು ಗಂಡನಾದ ನಿರೂಪಕನ ಸಂಬಂಧ, ಸುರೇಶ ಮತ್ತು ಅಂತಣ್ಣನ ಕುಟುಂಬದ ಸಂಬಂಧ, ರಮಣ ಮತ್ತು ನಿರೂಪಕನ ತಂದೆಯ ಸಂಬಂಧ—ಈ ಸಂಬಂಧಗಳೆಲ್ಲವೂ ಸಜೀವ ಸಂಬಂಧಗಳೆಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಆ ಸಂಬಂಧಗಳು ಎಲ್ಲೋ ಒಂದು ಕಡೆ ವಿಘಟನೆಗೊಂಡಿವೆ, ನಂಬಿಕೆ ಇಲ್ಲದ ಸಂಬಂಧಗಳಾಗಿವೆ. ವಿಜಿಯನ್ನು ಮದುವೆಯಾದಾಗ ತನ್ನನ್ನು ಬಿಟ್ಟು ಎಲ್ಲಿಯಾದರೂ ಹೋಗಬಹುದೇ ಎಂಬ ಅನುಮಾನವಿರುತ್ತದೆ. ಹಾಗೆಯೇ, ಮಗಳ ಒಡನಾಟ ಆಕೆಯ ಸ್ನೇಹಿತರು, ಸ್ನೇಹಿತೆಯರು ಎಂತಹವರು ಎಂಬ ಬಗ್ಗೆ ಅನುಮಾನಗಳೇ ಇರುತ್ತವೆ. ಆದರೆ, ನಿರೂಪಕ ಮತ್ತು ವಿಜಿ ಮಗಳನ್ನು ಚೆನ್ನಾಗಿ ಸಾಕುತ್ತಾರೆ. ಅದೊಂದು ಸಾಮಾಜಿಕ ಜವಾಬ್ದಾರಿ ಇರಬಹುದು ಇಲ್ಲವೇ ಸಮಾಜದ ಕಟ್ಟುಪಾಡುಗಳು ಇರಬಹುದು. ಅಂತೂ ಜವಾಬ್ದಾರಿಯುತ ತಂದೆಯಾಗಿ ಸಾಕುತ್ತಾನೆ. ಆದರೆ, ಮಗಳು ರೇಖಾ ಕಟ್ಟುಪಾಡುಗಳನ್ನು ವಿರೋಧಿಸುತ್ತಾ ಆಂತರಿಕ ಬಂಡಾಯಗಾರಳಾಗುತ್ತಾಳೆ.